೨೦ ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕ ಕಾರ್ಯಕ್ರಮವಾಗಿದೆ. ಆದು ಈಗ ಇಡೀ ರಾಜ್ಯದಲ್ಲಿ ಪೂರ್ಣಗೊಂಡಿದೆ. ಆದುದರಿಂದ ಆ ಯೋಜನೆಗೆ ಹಣವನ್ನು ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ನಾವು ಏನು ಮಾಡಿದ್ದೇವೆಂದರೆ ಯಾವ ಯಾವುದು ಅಪೂರ್ಣಗೊಂಡಿದೆಯೋ ಅದನ್ನೆಲ್ಲಾ ಎನ್‌ಆರ್‌ಇಪಿ ನಲ್ಲಿ ತೆಗೆದುಕೊಂಡು ಪೂರ್ಣಗೊಳಿಸತಕ್ಕ ಆದೇಶವನ್ನು ಈಗಾಗಲೇ ಕೊಟ್ಟಿದ್ದೇವೆ.

ಶ್ರೀ ಪಿ. ಮೂಡ್ಲೇಗೌಡ.—ಕೆಲವು ಕಡೆಗಳಲ್ಲಿ ಬೀಜ, ಗೊಬ್ಬರವನ್ನು ಕೊಡದೇ ಇದ್ದರೂ ಸಹ ಖರ್ಚು ಹಾಕಿರತಕ್ಕದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್,—ಅದು ಗಮನಕ್ಕೆ ಬಂದಿಲ್ಲ.

ಶ್ರೀ ಗಂಗಣ್ಣ.—ಸಿರಾ ತಾಲ್ಲೂಕ್ ಅಲ್ಲದೆ ಮತ್ತೆ ಇನ್ನು ಯಾವ ಯಾವ ಗ್ರಾಮಗಳಲ್ಲಿ ಈ ಕಾರ್ಯಕ್ರಮವನ್ನ್ ಕೈಗೊಂಡಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ನಾನು ಮೊದಲೇ ಹೇಳಿದೆ ಇದು ಕೇಂದ್ರ ಸರ್ಕಾರದವರು ಹಾಕಿಕೊಂಡಿರತಕ್ಕ ಯೋಜನೆ ಎಂದು, ಇದು ಕಳೆದ ೧೯೭೫ ನೇ ಇಸ್ವಿಯಿಂದ ನಿರಂತರವಾಗಿ ೨೦ ವರ್ಷದವರೆಗೆ ಹಾಕಿಕೊಂಡಿದ್ದಂಥ ಯೋಜನೆ. ಅದನ್ನು ಇಡೀ ರಾಜ್ಯಕ್ಕೆ ಹಮ್ಮಿಕೊಂಡು ಮಾಡಿರುವುದರಿಂದ ಅವರ ಪ್ರಶ್ನೆ ಉದ್ಭವವಾಗುವುದಿಲ್ಲ.

ಕರ್ನಾಟಕದಲ್ಲಿ ವೃತ್ತಿಪರ ಶಿಕ್ಷಣದ ಆಧಾರದ ಮೇಲೆಗೆ ಪ್ರಾರಂಭವಾದ ವಿದ್ಯಾಲಯಗಳ ಬಗ್ಗೆ.

೧೩೯. ಶ್ರೀ ಮಲ್ಲಾರಿಗೌಡ. ಎಸ್ ಪಾಟೀಲ್ (ಸಂಕೇಶ್ವರ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕದಲ್ಲಿ ವೃತ್ತಿಪರ ಶಿಕ್ಷಣದ ಆಧಾರದ ಮೇರೆಗೆ ಪ್ರಾರಂಭವಾದ ವಿದ್ಯಾಲಯಗಳೆಷ್ಟು.

ಆ) ಹಾಗಿದ್ದಲ್ಲಿ ವೃತ್ತಿಪರ ಶಿಕ್ಷಣದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

ಇ) ಸಕ್ಕರೆ ತಾಂತ್ರಿಕ ಪಾಸೂ ಕೃಷಿ ಡಿಪ್ಲೊಮ, ಈ ವ್ಯಾಸಾಂಗ ಸಂಕೇಶ್ವರದಲ್ಲಿ ಇದ್ದು ಮಾನೇಜ್ಮೆಂಟ್ ಮಹಾವಿದ್ಯಾಲಯದಿಂದ ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

ಈ) ಸಕ್ಕರೆ ತಾಂತ್ರಿಕ ಪಾಸಾಗದಲ್ಲಿ ಉತ್ತೀರ್ಣರಾಗಿದ್ದರೂ ಕರ್ನಾಟಕದಲ್ಲಿರುವ ಸಕ್ಕರೆ ಕಾರ್ಖಾನೆಯವರು ನೌಕರಿಯ ಮೇಲೆ ಇವರನ್ನು ತೆಗೆದುಕೊಳ್ಳದೇ ಇರುವುದಕ್ಕೆ ಕಾರಣಗಳೇನು;

ಉ) ವೃತ್ತಿಪರ ಶಿಕ್ಷಣದಲ್ಲಿ ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳಿಗೆ ನೌಕರಿ ಒದಗಿಸಲು ಕಡ್ಡಾಯ ಕಾನೂನು ಮಾಡಲು ಸರ್ಕಾರದವರು ತೆಗೆದುಕೊಳ್ಳುವ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ ಶಿಕ್ಷಣ ಮಂತ್ರಿಗಳು.—

ಅ) ವೃತ್ತಿಪರ ಶಿಕ್ಷಣದ ಆಧಾರದ ಮೇಲೆಯೇ ಯಾವ ವಿದ್ಯಾಲಯಗಳನ್ನು ಪ್ರಾರಂಭಿಸಿರುವುದಿಲ್ಲಾ. ಹಾಲಿ ಇರುವ ಕೆಲವು ಕಾಲೇಜು ವಿಭಾಗದಲ್ಲಿ ಕೆಲವು ವೃತ್ತಿಪರ ಶಿಕ್ಷಣದ ತರಗತಿಗಳನ್ನು ಪ್ರಾರಂಭಿಸಲಾಗಿದೆ.

A) No Institution has been started to run only Vocational courses. Some Vocational courses have been started in existing Junior Colleges.

ಆ) ೧೯೮೩ ರಲ್ಲಿ ನೇ ಸಾಲಿನವರೆಗೂ ಒಟ್ಟು ೬,೭೮೭ ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ.

B) Upto the year 1983–84, the number of students who have come out successfully is 6,787.

ಇ) ಸಂಕೇಶ್ವರದಲ್ಲಿರುವ ಎಲ್. ಕೆ. ಖೋಟ್, ವಾಣಿಜ್ಯ ಮಹಾವಿದ್ಯಾಲಯದಲ್ಲಿ ಸಕ್ಕರೆ ತಾಂತ್ರಿಕ ವೃತ್ತಿ ಶಿಕ್ಷಣದಲ್ಲಿ ೫೩ ವಿದ್ಯಾರ್ಥಿಗಳು ಮತ್ತು ಕೃಷಿ ಅರ್ಥಶಾಸ್ತ್ರ ಮತ್ತು ಕೃಷಿ ಆಡಳಿತ ವ್ಯಾಸಂಗದಲ್ಲಿ ೩೭ ವಿದ್ಯಾರ್ಥಿಗಳೂ ಉತ್ತೀರ್ಣರಾಗಿರುತ್ತಾರೆ.

C) 53 Students in Sugar Technology, and 37 students in Agricultural Economics and Farm Management courses have come out successfully from the L. K. Khot Commerce College, Sankeshwar.

ಈ) ಈ ವಿಷಯದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿ ನೌಕರಿ ಒದಗಿಸಿಕೊಡುವುದಕ್ಕೆ ಆದ್ಯತೆ ಕೊಡುವಂತೆ ನಿರ್ದೇಶಕರು (ಡೈರೆಕ್ಟರ್ ಆಫ್ ಶುಗರ್) ಕರ್ನಾಟಕದ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೂ ಸುತ್ತೋಲೆಯನ್ನು ಕಳಿಂಹಿಸಿರುತ್ತಾರೆ. ನೌಕರಿಯ ಮೇಲೆ ತೆಗೆದುಕೊಳ್ಳದಿರುವುದಕ್ಕೆ ಕಾರಣಗಳನ್ನು ವಿಚಾರಿಸಲಾಗುತ್ತಿದೆ.

D) The Director of Sugar in Karnataka has issued Circular Instructions to give preference to the students who have passed the Sugar Technology Vocational Course in the State for selection of such candidates in all Sugar Factories. Reasons for not recruiting them are being ascertained.

ಉ) ವೃತ್ತಿ ಶಿಕ್ಷಣ ಕೊಡುವಲ್ಲಿ ಸರ್ಕಾರದ ಮೂಲ ಉದ್ದೇಶವು ಉತ್ತೀರ್ಣರಾದ ವಿದ್ಯಾರ್ಥಿಗಳು ಉದ್ದಿಮೆಗಳಲ್ಲಿ ಸೇರುವುದಕ್ಕಾಗಿ ಅಥವಾ ಸ್ವಯಂ ಉದ್ಯೋಗ ನಡೆಸುವುದಕ್ಕಾಗಿ ಆಗಿರುತ್ತದೆ. ಅವರಿಗೆ ಸರ್ಕಾರಿ ಅಥವಾ ಖಾಸಗಿ ಏಲಯಗಳಲ್ಲಿ ಉದ್ಯೋಗಾವಕಾಶ ಕಲ್ಪಿಸಲು ತಕ್ಕ ಕ್ರಮ ತೆಗೆದುಕೊಳ್ಳಲಾಗಿದೆ. ಈ ದಿಸೆಯಲ್ಲಿ ಸರ್ಕಾರವು ಎಲ್ಲಾ ಇಲಾಖಾ ಮುಖ್ಯಸ್ಥರಿಗೂ, ಸರ್ಕಾರಿ ಕಾರ್ಖಾನೆಗಳಿಗೂ ಖಾಸಗಿ ಸಂಸ್ಥೆಗಳಿಗೂ ಪತ್ರ ವ್ಯವಹಾರ ಮಾಡಿದೆ. ಕೆಲವು ಇಲಾಖೆಗಳಲ್ಲಿ ಈಗಾಗಲೇ ಉದ್ಯೋಗಾವಕಾಶ ಕಲ್ಪಿಸಲಾಗಿದೆ. ಇನ್ನೂ ಕೆಲವು ಇಲಾಖೆಗಳು ಈ ದಿಸೆಯಲ್ಲಿ ತಕ್ಕ ಕ್ರಮ ಕೈಗೊಳ್ಳುತ್ತಿವೆ. ಈ ವಿಚಾರದಲ್ಲಿ ಕಡ್ಡಾಯ ಕಾನೂನು ಮಾಡುವುದು ಅಷ್ಟು ಸೂಕ್ತವಲ್ಲವೆಂದು ತೋರುತ್ತದೆ.

E) The main object of offering these Vocational courses is to make students to be-come eligible for employment or for self-employment. Provisions has already been made in many of Govt. Departments and Private Organisations to give preference to these students, by amending their Deparment rules. Many of the Government Departments and private Organisations are still considering the above matter. A compulsory legislation in this matter does not appear to be appropriate.

ಶ್ರೀ ಎಂ. ಎಸ್. ಪಾಟೀಲ್.—ಇವರಿಗೆಲ್ಲಾ ಉಚಿತವಾಗಿ ಕೆಲಸವನ್ನು ಕೊಡಿಸುವ ಬಗ್ಗೆ ಏನಾದರೂ ಕಾರ್ಯಕ್ರಮವನ್ನು ಕೈಗೊಂಡಿದ್ದೀರಾ ಎಂದು ಈ ಸದನದ ಮಂಲಕ ಮಾನ್ಯ ಸಚಿವರನ್ನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಬಿ. ರಾಚಯ್ಯ.—೬,೭೮೭ ಜನ ವಿದ್ಯಾರ್ಥಿಗಳು ಉತ್ತೀರ್ಣರಾಗಿರುವ ಪೈಕಿ ಈಗಾಗಲೇ ೫೫೯ ಜನ ಸರ್ಕಾರಿ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ, ಮತ್ತೆ ಪ್ರೈವೇಟ್ ಆರ್ಗನೈಜೇಷನ್‌ನಲ್ಲಿ ೧೧೮೪ ಜನ ಕೆಲಸ ಮಾಡುತ್ತಿದ್ದಾರೆ, ಸೆಲ್ಫ್ ಎಂಪ್ಲಾಯ್ಡ್ ಆಗಿರತಕ್ಕವರು ೭೬೫ ಮತ್ತೆ ಡಿಗ್ರಿ ಕಾಲೇಜ್‌ಗೆ ಸೇರಿರತಕ್ಕವರು ೧೯೭೬ ಜನ ಇದ್ದಾರೆ ಇನ್ನು ೧೭೪೪ ಜನರ ವಿಷಯ ಇನ್ನೂ ತಿಳಿದು ಬಂದಿಲ್ಲ.

ಶ್ರೀ ಎಂ. ಎಸ್. ಪಾಟೀಲ್.—ಗ್ರಾಮ ಸೇವಕರನ್ನು ನೇಮಿಸಿಕೊಳ್ಳುವ ಇವರಿಗೆ ಆದತ್ಕೆ ಕೊಟ್ಟು ಸೇರಿಸಿಕೊಳ್ಳುವ ಬಗ್ಗೆ ವಿತಕ್ಕೆ ತಾವು ಕ್ರಮವನ್ನು ತೆಗೆದುಕೊಳ್ಳುವಾರದು ?

ಶ್ರೀ ಬಿ. ರಾಚಯ್ಯ.—ಇದರ ಬಗ್ಗೆ ನಾವು ಡಿಪಿಎಪಿ ಯವರನ್ನು ಕೇಳಿದ್ದೇವೆ. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ಸ್ ರೂಲ್ಸ್ ಪ್ರಕಾರವಾಗಿ ಮಾಡುವ ಹಾಗಿದ್ದರೆ ಅಂಥವರಿಗೆ ಅವಕಾಶವನ್ನು ಮಾಡಿಕೊಡುತ್ತೇವೆ.

ಶ್ರೀ ಎಂ. ಎಸ್. ಪಾಟೀಲ್.—ಈ ವೃತ್ತಿಪರ ಶಿಕ್ಷಣ ಕ್ಷೇತ್ರ ಬೆಳೆಯುವುದಕ್ಕೆ ಸರ್ಕಾರದವರು ಒಂದು ವಿಶಿಷ್ಟವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳದೇ ಹೋದರೆ, ಇದನ್ನು ವಿದ್ಯಾರ್ಥಿಗಳು ಯಾರೂ ಇಷ್ಟಪಡುವುದಿಲ್ಲ. ಆದುದರಿಂದ ಇದರ ಬಗ್ಗೆ ವಿಶಿಷ್ಟವಾಗಿ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ ರಾಚಯ್ಯ.—ಈಗ ಸರ್ಕಾರದವರು ನೇಮಿಸಿಕೊಂಡಿರತಕ್ಕ ಸಂಬ್ಳ ಕಡಿಮೆಯಾಗಿದೆ ಆದರೆ ಖಾಸಗಿ ಸಂಸ್ಥೆಗಳವರು ಮತ್ತು ಸ್ವಯಂ ಸ್ವಾವಲಂಬಿಗಳಾಗಿ ಕೆಲಸ ಮಾಡಬೇಕು ಎನ್ನತಕ್ಕ ಉದ್ದೇಶದಿಂದ ಮತ್ತು ಅವರು ಇನ್ನೂ ಹೆಚ್ಚಿನ ಪ್ರಮಾಣದ ವಿದ್ಯಾಭ್ಯಾಸಕ್ಕೆ ಹೋಗಬೇಕು ಎನ್ನುವ ಈ ಎಲ್ಲಾ ಕಾರಣಗಳು ಇರುವುದರಿಂದ, ವೃತ್ತಿಪರ ಶಿಕ್ಷಣಕ್ಕೆ ನಾವು ಹೆಚ್ಚಿನ ಆದ್ಯತೆ ಕೊಡಬೇಕೆಂದು ಹೇಳಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ಸ್ ರೂಲ್ಸ್‌ನ್ನು ಬದಲಾವಣೆ ಮಾಡಬೇಕೆಂದು ಕೇಳಿದ್ದೇವೆ.

ಶ್ರೀ ಎಂ. ಸೂರ್ಯನಾರಾಯಣ ರಾವ್.—ಸ್ವಾಮಿ, ಮೈಸೂರಿನಲ್ಲಿ ಮಿಷನರಿ ಮ್ಯಾನು ಫಾಕ್ಚರಿಂಗ್ ಕಂಪನಿಯಲ್ಲಿ ವೃತ್ತಿಪರ ಶಿಕ್ಷಣ ಪಡೆದಿದ್ದರೂ ಸಹ ಅವರು ಆ ಫ್ಯಾಕ್ಟರಿಯಲ್ಲಿ ಮತ್ತೆ ಮತ್ತೆ ೩ ವರ್ಷಗಳ ಕಾಲ ಟ್ರೈನಿಂಗ್ ಪಡೆಯಕೊಂಡ ಮೇಲೆ ಅವರನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ ಇದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಎರಡನೆಯದಾಗಿ ನಮ್ಮ ವರ್ತೂರು ಕ್ಷೇತ್ರದಲ್ಲಿ ಒಂದು ಪಾಲಿಟೆಕ್ನಿಕ್‌ನ್ನು ಸ್ಥಾಪಿಸುತ್ತೀರಾ ?

ಶ್ರೀ ಬಿ. ರಾಚಯ್ಯ.—ಮೊದಲನೆಯ ಪ್ರಶ್ನೆ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿ ಹೇಳಿದ್ದಾರೆ ಅದು ನನ್ನ ಗಮನಕ್ಕೆ ಬಂದಿಲ್ಲ. ಎರಡನೆಯದಾಗಿ ವರ್ತೂರಿನಲ್ಲಿ ಪಾಲಿಟೆಕ್ನಿಕ್‌ನ್ನು ಸ್ಥಾಪಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕ ರಾಜ್ಯದಲ್ಲಿ ಹೊಗೆಸೊಪ್ಪಿನ ಬ್ಯಾರನ್‌ಗಳಿಗೆ ಕೊಡಬೇಕಾದ ರಿಯಾಯಿತಿ.

೭೨ ಶ್ರೀ ಕೆ. ಎಸ್. ಕಾಳಮರಿಗೌಡ (ಹಿರಿಯಾಪಟ್ಟಣ).—ಮಾನ್ಯ ಕೃಷಿ ಮತ್ತು ಪಶು ಸಂಗೋಪನ ಇಲಾಖೆಯ ಮಂತ್ರಿಗಳು ದಯವಿಟ್ಟು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದಲ್ಲಿ ಹೊಗೆಸೊಪ್ಪಿನ ಬ್ಯಾರನ್‌ಗಳಿಗೆ ೧೯೭೬-೭೮ ಮತ್ತು ೧೯೭೮-೭೯ನೇ ಸಾಲುಗಳಲ್ಲಿ ಕೊಡಬೇಕಾದ ರಿಯಾಯಿತಿ ಮೊತ್ತ ಎಷ್ಟು ?

ಆ) ಈ ಹಣ ಕೇಂದ್ರ ಸರ್ಕಾರದಿಂದ ಬಂದಿದೆಯೇ; ಹಾಗಿದ್ದಲ್ಲಿ ಈ ಹಣ ವಿತರಣೆ ಆಗಿದೆಯೇ ?

ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್ (ಕೃಷಿ ಮಂತ್ರಿಗಳು).—

ಅ) ೧೯೭೬-೭೮ ೧. ರೂ. ೩೨, ೦೬,೨೫೦.೦೦

೧೯೭೮-೭೯ ೨. ರೂ. ೨೬,೩೭,೭೫೦.೦೦

ಆ) ಬಂದಿದೆ ಹಾಗೂ ವಿತರಣೆ ಮಾಡಲಾಗಿದೆ.

ಶ್ರೀ ಕೆ. ಎಸ್. ಕಾಳಮರಿಗೌಡ.—೧೯೭೬-೭೮ ಮತ್ತು ೧೯೭೮-೭೯ರಲ್ಲಿ ಕೇಂದ್ರಸರ್ಕಾರದಿಂದ ಸಬ್ಸಿಡಿ ಬಂದಿದೆ. ೧೫೦೦ ಬ್ಯಾರನ್‌ಗಳಿಗೆ ಆದನ್ನು ಕೊಡುತ್ತಾ ಇದ್ದಾರೆ. ೧೯೭೬-೭೮ ಮತ್ತು ೧೯೭೮-೭೯ರಲ್ಲಿ ಬ್ಯಾರನ್‌ಗಳಿಗೆ ಒಟ್ಟು ಕೊಡಬೇಕಾದಂಥ ಹಣ ಎಷ್ಟು. ಆದರಲ್ಲಿ ಎಷ್ಟು ಹಣ ಬಂದಿದೆ, ಬಂದಿರತಕ್ಕ ಹಣವನ್ನು ಸರಿಯಾಗಿ ಉಪಯೋಗ ಮಾಡಿದ್ದೀರಾ ? ಕೇಂದ್ರಸರ್ಕಾರದಿಂದ ಸಬ್ಸಿಡಿ ಹಣವನ್ನು ರಾಜ್ಯ ಸರ್ಕಾರ ಬ್ಯಾನರ್‌ಗಳಿಗೆ ಸಂಪೂರ್ಣವಾಗಿ ಕೊಟ್ಟಿದೆಯೇ ? ಕೇಂದ್ರಸರ್ಕಾರ ಎಷ್ಟು ಸಬ್ಸಿಡಿ ಕೊಡಬೇಕಾಗಿತ್ತೋ ಅಷ್ಟನ್ನು ಕೊಟ್ಟಿದೆಯೇ ? ಪಾರ್ಲಿಮೆಂಟ್‌ನಲ್ಲಿ ಈ ಬಗ್ಗೆ ಉತ್ತರ